ಬೆಳ್ತಂಗಡಿ ತಾಲ್ಲೂಕಿನಲ್ಲಿ ಪಶ್ಚಿಮಘಟ್ಟ ಯೋಜನೆಯ ಬಗ್ಗೆ.

೧೭೯೭ ಶ್ರೀ ವಸಂತ ಬಂಗೇರ (ಬೆಳ್ತಂಗಡಿ) :– ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಪಶ್ಚಿಮ ಘಟ್ಟ ಯೋಜನೆಯನ್ವಯ ಬೆಳ್ತಂಗಡಿ ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಎಷ್ಟೆಷ್ಟು ಕಾಮಗಾರಿಗಳನ್ನು ಈವರೆವಿಗೆ ಕೈಗೆತ್ತಿಕೊಂಡು ಪೂರ್ಣ ಮಾಡಲಾಗಿದೆ·

ಆ) ಬೆಳ್ತಂಗಡಿ ತಾಲ್ಲೂಕಿಗೆ ಕದಿಮೆ ಕಾಮಗಾರಿಗಳು ಮಂಜೂರಾಗಲು ಕಾರಣವೇನು.

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ಪಶ್ಚಿಮ ಘಟ್ಟಗಳ ಅಭಿವೃದ್ಧಿ ಯೋಜನೆಯಲ್ಲಿ ಸಣ್ಣ ನೀರಾವರಿ ವಿಭಾಗದಲ್ಲಿ ೧೯೮೬–೮೪ರಿಂದೀಚೆಗೆ ಕದ್ರುದ್ಯಾವರ, ಪುತ್ತಿಗೆ, ಶಿಶಿಲ, ಕಡಿವದ್ನವಾನ, ನೇತ್ರಾವತಿ, ವಂಂಡಾಜೆ, ಮಂೂರಕಟಕೋಡಿ, ಶಿಶಿಲೇಶ್ವರ ದೇವಾಲಯ, ಗೇರುಕೆಟ್ಟೆ, ಮಾಚಿನ ಮೊಗ್ರು ಸುಲ್ಕೆಮೊಗರು, ದಾರುವಲ್ಲಿ ಕಲಮಾಜೆ, ಹಳ್ಳಿಗಳಲ್ಲಿ ಕಾಮಗಾರಿಗಳನ್ನು ತೆಗೆದುಕೊಳ್ಳಲಾಗಿದೆ. ಇದರಲ್ಲಿ ಏಳು ಕಾಮಗಾರಿಗಳು ಪೂರ್ಣವಾಗಿವೆ ಕಾಲು ಸುಂಕಗಳ ಪೈಕಿ ನೇರಿಯಂ ತೋಟಕಾಡಿ ಷಟ್ಟಯ್ಕೆಲಂ, ಶಿರಾಲ್‌ಕೋಡು, ಆರಂಬಾಡಿ, ವೈಲನೆರವಿ, ಇಣಡೆಟ್ಟು ಈ ಹಳ್ಳಿಗಳಲ್ಲಿ ಕಾವಂಗಾರಿಗಳನ್ನು ತೆಗೆದಂ ಪೂರ್ಣಗೊಳಿಸಲಾಗಿದೆ.

ಆ) ಆಯಾ ತಾಲ್ಲೂಕಿನಲ್ಲಿ ಬಹಂ ಮಂಖ್ಯವಾಗಿ ಬೇಕಾಗುವ ಕಾವಂಗಾರಿಗಳನ್ನು ಆದ್ಯತೆ ಮೇರೆಗೆ ಕೈಗೆತ್ತಿಕೊಳ್ಳಲಾಗುವುದು. ಯೋಜನಾ ಆ ಯೋಗವು ಕಾಲಂ ಸಂಕಕ್ಕೆ ಕಡಿಮೆ ಆದತ್ಯೆ ನೀಡಿರಂವುದು ಮುಖ್ಯವಾದ ಕಾರಣ.

ಬೆಳ್ತಂಗಡಿ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿನ ಕೊಳವೆ ಬಾವಿಗಳ ಪಂಪ್ ಸೆಟ್‌ಗಳ ಬಗ್ಗೆ.

೧೭೯೫ ಶ್ರೀ ಕೆ. ವಸಂತಬಂಗೇರಾ (ಬೆಳ್ತಂಗಡಿ) ಮಾನ್ಯ ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಳ್ತಂಗಡಿ ತಾಲ್ಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕೊಳವೆ ಬಾವಿಗಳ ಪಂಪಿನ ಮೋಟಾರು ಕೀಳು ದರ್ಜೆಯದಾಗಿದ್ದು ಸಟ್ಟು ಹೋಗಿ ಪಂಪು ಕೆಲಸ ಮಾಡದೆ ನೀರು ಪೂರೈಕೆ ಕಳೆದ ನಾಲ್ಕೈದು ತಿಂಗಳಿಂದ ತೊಂದರೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಈ ಮೋಟಾರನ್ನು ಎಲ್ಲಿಂದ ಪಡೆಯಲಾಗಿತ್ತು ಹಾಗೂ ಈ ಮೋಟಾರಿನ ಬೆಲೆ ಎಷ್ಟು ?

ಇ) ಈ ರೀತಿ ಮೋಟರನ್ನು ಬದಲಿಸಲು ವಿಳಂಬವೇಕೆ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ವಸತಿ ಹಾಗೂ ವಕ್ಫ್ ಮಂತ್ರಿಗಳು).—

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಈಗ ಹಾಲಿ ಚಾಲ್ತಿಯಲ್ಲಿರುವ ೧೯ ಮೋಟಾರು ಮತ್ತು ಪಂಪುಗಳಲ್ಲಿ ಗುರುವಾಯನಕೆರೆಯಲ್ಲಿರುವ ಒಂದು ಮೋಟಾರು ಮಾತ್ರ ಇತ್ತೀಚೆಗೆ ಕೆಟ್ಟಿದೆ. ಇದನ್ನು ಸರಿಪಡಿಸಲಂ ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಮೋಟಾರು ಮತ್ತು ಪಂಪುಗಳನ್ನು ಸರಕು ಖರೀದಿ ಇಲಾಖೆಯು ನಿರ್ಧರಿಸಿದ ದರಗಳಲ್ಲಿ ಮೆ॥ ರಾಧಾ, ಬಜಾಜ್, ಅಟ್ಲಾಂಟ್, ಎಂಬಿಹೆಚ್ ಮತ್ತು ಕಿರ್ಲೋಸ್ಕರ್ ಕಂಪನಿಗಳಿಂದ ಪಡೆಯಲಾಗಿದೆ.

ಇವುಗಳ ಬೆಲೆ ಅಶ್ವ ಶಕ್ತಿಯ ಮೇಲೆ ಸುಮಾರು ೬,೦೦೦–೦೦ ರಿಂದ ರೂ. ೧೮,೦೦೦–೦೦ ಗಳವರೆಗೆ ಇರುತ್ತದೆ.

ಇ) ಈ ಮೋಟಾರ್ ಪಂಪನ್ನು ಅಳವಡಿಸಿದ ಒಂದು ವರ್ಷದೊಳಗೆ ಕೆಟ್ಟರೆ ಕಂಪನಿಯವರು ಉಚಿತ ರಿಪೇರಿ ಮಾಡುವರು. ಒಂದು ವರ್ಷದ ನಂತರ ಕೆಟ್ಟರೆ ಇಲಾಖೆಯವರು ದುರಸ್ತಿ ಮಾಡುವರು. ಕೆಟ್ಟು ಹೋದ ಮೋಟಾರು ಪಂಪುಗಳನ್ನು ದುರಸ್ತಿ ಮಾಡುವಲ್ಲಾಗುವ ವಿಳಂಬವನ್ನು ಆದಷ್ಟು ಕಡಿಮೆ ಮಾಡಲು ಪ್ರಯತ್ನಿಸಲಾಗುತ್ತಿದೆ.

ಬೆಂಗಳೂರು ಮಹಾನಗರ ಪಾಲಿಕೆಯ ಅಭಿವೃದ್ಧಿ ಕೆಲಸಗಳ ಬಗ್ಗೆ

೧೧೯೬. ಶ್ರೀ ಸಿ. ಕಣ್ಣನ್ (ಶಾಂತಿನಗರ),—ಮಾನ್ಯ ಕಾನೂನು, ಸಂಸದೀಯ ವ್ಯವಹಾರ, ನಗರಾಭಿವೃದ್ಧಿ ಹಾಗೂ ಆಹಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಮಹಾನಗರ ಪಾಲಿಕೆಯು ಕಳೆದ ಮೂರು ತಿಂಗಳಿಂದ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣವೇನು ;

ಇ) ಸರ್ಕಾರವು ಬೆಂಗಳೂರು ಮಹಾನಗರ ಪಾಲಿಕೆಯ ಕೆಲಸಗಳಿಗೆ ಅಧಿಕಾರ ವರ್ಗಕ್ಕೆ ತಕ್ಷಣವೇ ಎಲ್ಲೆಲ್ಲಿ ಬೇಕಾಗಿದೆಯೋ ಅಲ್ಲಲ್ಲಿ ಅಭಿವೃದ್ಧಿ ಕೆಲಸಗಳನ್ನು ತೆಗೆದುಕೊಳ್ಳಲು ನಿರ್ದೇಶನ ನೀಡುವುದೇ ?

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರನಗರಾಭಿವೃದ್ಧಿ ಹಾಗೂ ಆಹಾರ ಸಚಿವರು).—

ಅ) ನಿಜವಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಚಿತ್ರದುರ್ಗ ಜಿಲ್ಲೆಯಲ್ಲಿರುವ ವಸತಿ ನಿಲಯಗಳ ಬಗ್ಗೆ

೧೧೬೧(ಉ) ಕೆ.ಹೆಚ್. ಆಶ್ವತ್ಥರೆಡ್ಡಿ (ಜಗಳೂರು).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಚಿತ್ರದುರ್ಗ ಜಿಲ್ಲೆಯಲ್ಲಿರುವ ಹಿಂದುಳಿದ ವರ್ಗಗಳ, ಪರಿಶಿಷ್ಟ ವರ್ಗದವರ ಮತ್ತು ಹೆಣ್ಣು ಮಕ್ಕಳ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ; (ತಾಲ್ಲೂಕುವಾರು ವಿವರ ನೀಡುವುದು)

ಆ) ಈ ವಿದ್ಯಾರ್ಥಿನಿಲಯಗಳ ಪೈಕಿ ಎಷ್ಟು ವಿದ್ಯಾರ್ಥಿನಿಲಯಗಳಿಗೆ ಸ್ವಂತ ಕಟ್ಟಡ ಇದೆ (ತಾಲ್ಲೂಕುವಾರು ವಿವರ ನೀಡುವುದು)

ಇ) ಉಳಿದ ವಿದ್ಯಾರ್ಥಿನಿಲಯಗಳಿಗೆ ಕಟ್ಟಡಗಳನ್ನು ಎಂದು ನಿರ್ಮಿಸಲಾಗುವುದು ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

		ಸರ್ಕಾರಿ	ಖಾಸಗಿ		
ಅ)	ಹಿಂದುಳಿದ ವರ್ಗ	೩೫	೧೧	೪೬	ಪಟ್ಟಿ ಅನುಬಂಧ-೧
	ಪರಿಶಿಷ್ಟ ವರ್ಗ	೪೭	೫೮	೧೦೫	ಪಟ್ಟಿ ಅನುಬಂಧ-೨ ಇವುಗಳಲ್ಲಿ ೮ ನಿಲಯಗಳು ಮಾತ್ರ ಖಾಸಗಿಯವರಿಂದ ಪರಿಶಿಷ್ಟ ವರ್ಗದವರಿಗೆ ಪ್ರತ್ಯೇಕವಾಗಿ ನಡೆಸಲ್ಪಡುತ್ತವೆ.
	ಹೆಣ್ಣು ಮಕ್ಕಳ ನಿಲಯ	೧೩	೪	೧೭	ಪಟ್ಟಿ ಅನುಬಂಧ-೩

ಆ) ೨೬. (ಪಟ್ಟಿ ಅನುಬಂಧ-೪)

ಇ) ಹಣದ ಅನುಕೂಲತೆಯನ್ನು ಮತ್ತು ನಿವೇಶನ ದೊರಕುವ ಅನುಕೂಲತೆಗಳನ್ನು ಅನುಸರಿಸಿ ಹಂತ ಹಂತವಾಗಿ ಕಟ್ಟಡ ನಿರ್ಮಿಸಲು ಕೈಗೊಳ್ಳಲಾಗುವುದು.